ದಿನಾಂಕ:29/10/2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಖ್ಯವಿಚಾರಣೆ: ವಾದಿಯ ಪರ ಶ್ರೀ ಎಂ.ಜಿ.ಯು ವಕೀಲರಿಂದ:**

ನಾನು ಈ ದಾವೆಯಲ್ಲಿ ವಾದಿಯಾಗಿರುತ್ತೇನೆ. ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅದರಲ್ಲಿ ಬರೆದ ಮಾಹಿತಿಯನ್ನು ವಕೀಲರಿಗೆ ನಾನೇ ನೀಡಿರುತ್ತೇನೆ. ಅದರಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ ಮತ್ತು ಅದರಲ್ಲಿಯ ಸಹಿ ನನ್ನದೇ ಆಗಿರುತ್ತದೆಂದು ಈ ಮೂಲಕ ಪ್ರಮಾಣಿಕರಿಸುತ್ತೇನೆ.

ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ.

1. ಡಿಮ್ಯಾಂಡ್ ರಿಜಿಸ್ಟರ್. ಅದನ್ನು ನಿಪಿ-**1** ಎಂದು ಗುರುತಿಸಲಾಯಿತು.
2. ಮೂರು ಕಂದಾಯ ರಶೀಧಿಗಳು. ಅವುಗಳನ್ನು ಕ್ರಮವಾಗಿ ನಿಪಿ-**2** ರಿಂದ ನಿಪಿ-**4** ಎಂದು ಗುರುತಿಸಲಾಯಿತು.
3. ಆಸ್ತಿತೆರಿಗೆ ಸ್ವಯಂ ನಿರ್ಧರಣ ನಮೂನೆ. ಅದನ್ನು ನಿಪಿ-**5** ಎಂದು ಗುರುತಿಸಲಾಯಿತು.
4. ಮೂರು ಬಾವಚಿತ್ರಗಳು. ಅವುಗಳನ್ನು ಕ್ರಮವಾಗಿ ನಿಪಿ-**6** ರಿಂದ ನಿಪಿ-**8** ಎಂದು, ಅದಕ್ಕೆ ಸಂಬಂಧಿಸಿದ ಸಿಡಿ ಅನ್ನು ನಿಪಿ-**9** ಎಂದು ಗುರುತಿಸಲಾಯಿತು.
5. ದಿ: **20.05.2016** ರ ನೋಂದಾಯಿತ ವಿಭಾಗಪತ್ರ. ಅದನ್ನು ನಿಪಿ-**10** ಎಂದು ಗುರುತಿಸಲಾಯಿತು.
6. ವಂಶವೃಕ್ಷದ ದೃಢೀಕರಣ. ಅದನ್ನು ನಿಪಿ-**11** ಎಂದು ಗುರುತಿಸಲಾಯಿತು.
7. ಮರಣ ಪ್ರಮಾಣಪತ್ರ. ಅದನ್ನು ನಿಪಿ-**12** ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯವಿಚಾರಣೆ:** ವಕೀಲರು ಸಮಯ ಕೋರಿದ್ದರಿಂದ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.

ಓ.ಕೇ.ಸ.ಇ.ಎ.ಒ.

ಪ್ರಧಾನ ವ್ಯವಹಾರ ನ್ಯಾಯಾಧೀಶರು,

ಶಿಕಾರಿಪುರ.